ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ (ಕೋವಿಡ್-19)

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE : 05/08/2020

# ಸಚಿವ ಸೋಮಶೇಖರ್, ಶಾಸಕ ಹಾಲಪ್ಪಗೆ ಸೋಂಕು

## ಸೋಂಕು ತಗಲಿದ ರಾಜ್ಯದ 3ನೇ ಮಂತ್ರಿ ಎಸ್‌ಟಿಎಸ್





ಬೆಂಗಳೂರು/ ಶಿವಮೊಗ್ಗ: ಸಹಕಾರ ಸಚಿವ ಎಸ್.ಟಿ. ಸೋಮಶೇಖರ್‌ಮತ್ತುಎಂಎಸ್‌ಐಎಲ್‌ಅಧ್ಯಕ್ಷರಾಗಿರುವಶಾಸಕ ಹರತಾಳುಹಾಲಪ್ಪಅವರಿಗೆಕೊರೋನಾಸೋಂಕುದೃಢಪಟ್ಟಿದೆ. ಸಚಿವರ ಪೈಕಿ ಸೋಂಕು ದೃಢವಾಗಿರುವ ಮೂರನೆಯ ವ್ಯಕ್ತಿ ಸೋಮಶೇಖರ್. ಈ ಮೊದಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಿ.ಟಿ.ರವಿ ಅವರಿಗೆ ಸೋಂಕು ತಗುಲಿತ್ತು. ಆದಾದ ಬಳಿಕ ಕೃಷಿ ಸಚಿವಬಿ.ಸಿ.ಪಾಟೀಲರಿಗೆಸೋಂಕುದೃಢವಾಗಿದ್ದು,ಕ್ವಾರಂಟೈನ್‌ನಲ್ಲಿ ಇದ್ದಾರೆ. ಇದೇ ವೇಳೆ ಸೋಮಶೇಖರ್ ಅವರ ಪುತ್ರನಿಗೂ ಸೋಂಕು ಇರುವುದು ದೃಢಪಟ್ಟಿದೆ.ಮೈಸೂರು ಜಿಲ್ಲೆ ಉಸ್ತುವಾರಿ ಸಚಿವರೂ ಆದ ಎಸ್.ಟಿ. ಸೋಮಶೇಖರ್ ಬೆಂಗಳೂರಿನ ರಾಜರಾಜೇಶ್ವರಿನಗರ ವಲಯದ ಕೊರೋನಾ ನಿಯಂತ್ರಣದ ಉಸ್ತುವಾರಿ ವಹಿಸಿಕೊಂಡಿದ್ದರು. ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸಲು ಸಾಕಷ್ಟು ಓಡಾಡಿದ್ದರು.

**ಹಾಲಪ್ಪಗೆ ಸೋಂಕು:** ಸಾಗರ ಕ್ಷೇತ್ರದ ಬಿಜೆಪಿ ಶಾಸಕ ಹಾಗೂ ಎಂಎಸ್‌ಐಎಲ್ ಅಧ್ಯಕ್ಷ ಹರತಾಳು ಹಾಲಪ್ಪ ಅವರಿಗೆ ಸೋಂಕು ದೃಢಪಟ್ಟಿದೆ. ಹಾಲಪ್ಪ ಅವರು ತಮಗೆ ಸೋಂಕು ತಗುಲಿರುವುದನ್ನು ಖುದ್ದು ಖಚಿತಪಡಿಸಿದ್ದಾರೆ. ಜತೆಗೆ, ತಮ್ಮ ಪತ್ನಿ, ಕಾರು ಚಾಲಕ ಹಾಗೂ ಓರ್ವ ಸಿಬ್ಬಂದಿ ವರದಿ ಪಾಸಿಟಿವ್ ಬಂದಿದೆ.